**ದಿನಾಂಕ: 23-06-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ: ವಾದಿ ಪರ ಶ್ರೀ.ಕೆ.ಎಸ್.ಎಂ. ವಕೀಲರಿಂದ**

| | |
|---|---|
| ನಿಪಿ-81 | ಆದಾಯ ಮತ್ತು ಜಾತಿ ಪ್ರಮಾಣ ಪತ್ರ |
| ನಿಪಿ-82 | ಪ್ಯಾನ್ ಕಾರ್ಡ್ |

**ವಾಟೀ ಸವಾಲುಃ 1 ರಿಂದ 3ನೇ ಪ್ರತಿವಾದಿ ಪರ ಶ್ರೀ ಪಿಪಿಕೆ ವಕೀಲರಿಂದಃ**

1. ನಾನು ಶಾಲೆ ಓದಿಲ್ಲ. ನಿಮ್ಮ ಜನ್ಮ ದಿನಾಂಕವನ್ನು ತೋರಿಸಲು ಜನನ ಪ್ರಮಾಣ ಪತ್ರ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಅಪ್ಪಾರಾಯನ ಮನೆಯಲ್ಲಿ ಇದ್ದೀರಿ ಎಂದು ತೋರಿಸಲು ಓಟರ್ ಐಡಿ ಕಾರ್ಡ್ ರೇಷನ್ ಐಡಿ ಕಾರ್ಡ್ ಹಾಜರುಪಡಿಸಿದ್ದೀರಾ ಎಂದರೆ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ನಿಪಿ-82 ಪ್ಯಾನ್ ಕಾರ್ಡ್ ಚನ್ನೂರಿನಲ್ಲಿದ್ದಾಗ ತಯಾರು ಮಾಡಿದ್ದೀರಿ ಎಂದರೆ ಸರಿ. ನಿಪಿ-81 ಜಾತಿ ಪ್ರಮಾಣ ಪತ್ರ ಚನ್ನೂರ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಇದೆ ಎಂದರೆ ಸರಿ. ನೀವು ತಹಸೀಲಗೆ ಯಾವ ರೀತಿ ಪ್ರಮಾಣ ಪತ್ರ ಬರೆದುಕೊಟ್ಟಿದ್ದೀರಿ ಅದೇ ರೀತಿ ಅವರು ಬರೆದುಕೊಟ್ಟಿದ್ದಾರೆ ಎಂದರೆ ಸರಿ.

2. ಅಪ್ಪಾರಾಯ ತೀರಿಕೊಂಡು ಸುಮಾರು 20 ವರ್ಷಗಳಾಗಿರುತ್ತವೆ. ಈ 20 ವರ್ಷಗಳಲ್ಲಿ ನೀವಾಗಲೀ ಕಮಲಾಬಾಯಿಯಾಗಲೀ ನೀವು ಅಪ್ಪಾರಾಯನ ಮಕ್ಕಳು ಎಂದು ಎಲ್ಲಿಯಾದರೂ ಕೇಸ್ ಮಾಡಿದ್ದೀರಾ ಎಂದರೆ ನಮ್ಮ ಅಕ್ಕ ಕಮಲಾಯಿ ಮಾಡಿರುತ್ತಾಳೆ. ಕಮಲಾಬಾಯಿ ಮಾಡಿರುವ ಕೇಸ್ ಇದೊಂದೇ ಕೇಸ್ ಎಂದರೆ ಸರಿ. ಈ ಕೇಸನ್ನು ನೀವು ಅಪ್ಪಾರಾಯನ ಮಕ್ಕಳು ಎಂದು ತೋರಿಸಲು ಬೇರೆ ಯಾವುದೇ

ಕೇಸಿನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ನಮಗೆ ಇಂಥದ್ದೆಲ್ಲಾ ಗೊತ್ತಾಗಲ್ಲ ಎಂದು ಉತ್ತರಿಸುತ್ತಾರೆ. ಈ ಕೇಸ್ ಹಾಕಿದ ನಂತರ ನೋಟಿಸ್ ಬಂದಿದೆ ಎಂದರೆ ಒಂದೇ ಸಾರಿ ಬಂದಿದೆ. ಸದರಿ ನೋಟಿಸ್ ನನಗೆ ತಲುಪಿದ ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಈಗ ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ಕಮಲಾಬಾಯಿ ಮತ್ತು ಆಕೆಯ ಮಗ ನಿಮಗೆ ಕರೆದುಕೊಂಡು ಬಂದಿದ್ದರಿಂದ ನೀವು ಬಂದಿದ್ದೀರಿ ಎಂದರೆ ಸರಿ. ನಿಮಗೆ ದಾವಾ ಪ್ರತಿಯನ್ನು ಮುಟ್ಟಿದ ನಂತರ ಬೇರೆ ಜವಾಬು ಹಾಕಿಲ್ಲ ಮತ್ತು ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಈಗ ಹಾಕಿಲ್ಲ ನಮ್ಮ ಅಕ್ಕ ಹಾಕಿರುತ್ತಾರೆ ಎಂದು ಉತ್ತರಿಸುತ್ತಾರೆ.

3. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದರೆ ನಾನು ಶಾಲೆನೇ ಕಲಿತಿಲ್ಲ ಎಂದು ಉತ್ತರಿಸುತ್ತಾರೆ. ಕಮಲಾಬಾಯಿಯ ಮಗ ಬರೆಸಿರುತ್ತಾರೆ ಅದಕ್ಕೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸಹಿ ಅಷ್ಟು ಜನ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನೀವು ಕಮಲಾಬಾಯಿ ಜೊತೆಯಲ್ಲಿ ಶಾಮೀಲಾಗಿ ನೀವು ಸಹ ಅಪ್ಪಾರಾಯನ ಮಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ನಾವು ಸಹ ಅಪ್ಪಾರಾಯನ ಮಕ್ಕಳು ಇರುತ್ತೇವೆ ಎಂದು ಉತ್ತರಿಸುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ